ದಿನಾಂಕಃ **04.04.2025** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು : **1** ನೇ ಪ್ರತಿವಾದಿಯ ಪರ ಶ್ರೀ ಟಿ.ಜೆ.ಎಂ. ವಕೀಲರಿಂದಃ

04. ನನ್ನಿಂದ ನನ್ನ ತಾಯಿಯ ಸಹಿ ಗುರುತಿಸಲು ಸಾಧ್ಯವಾಗುತ್ತದೆ. ಸಾಕ್ಷಿಗೆ ವಾದ ಪತ್ರದಲ್ಲಿ ಇರುವ ವಾದಿಯ ಸಹಿಗಳನ್ನು ತೋರಿಸಿದ್ದು ಸಾಕ್ಷಿಯು ಸದರಿ ಸಹಿಗಳು ಅವರ ತಾಯಿಯ ಸಹಿಗಳೆಂದು ಒಪ್ಪಿದ್ದಾರೆ. ಸಾಕ್ಷಿಗೆ ನೋಂದಣೆಯಾಗದ ಪಾಲುವಿಭಾಗ ಪತ್ರವನ್ನು ತೋರಿಸಿ ಇದರಲ್ಲಿ ನಿಮ್ಮ ತಾಯಿಯ ಸಹಿಯನ್ನು ಗುರುತಿಸಿ ಎಂದು ಕೇಳಿದ್ದಾರೆ, ಸಾಕ್ಷಿಯು ವಿಭಾಗ ಪತ್ರವನ್ನು ನೋಡಿ ಇದರಲ್ಲಿ ನನ್ನ ತಾಯಿಯ ಸಹಿ ಇಲ್ಲವೆಂದು ಹೇಳಿದ್ದಾರೆ. ವಾದ ಪತ್ರದಲ್ಲಿ ಇರುವ ವಾದಿಯ ಸಹಿಗಳು ಮತ್ತು ಈಗ ತೋರಿಸಿದ ಪಾಲುವಿಭಾಗ ಪತ್ರದಲ್ಲಿ ಇರುವ ವಾದಿಯ ಸಹಿಗಳು ಒಂದೇ ರೀತಿಯಲ್ಲಿ ಇರುತ್ತವೆ ಎಂದರೆ ಸರಿಯಲ್ಲ. ದಿನಾಂಕ 06.02.2011 ರಂದು ನನ್ನ ತಾಯಿ ಮತ್ತು 1 ರಿಂದ 3 ನೇ ಪ್ರತಿವಾದಿಗಳ ನಡುವೆ ಪಾಲುವಿಭಾಗವಾಗಿತ್ತು ಎಂದರೆ ಸರಿಯಲ್ಲ. ಸದರಿ ಪಾಲುವಿಭಾಗ ಪತ್ರಕ್ಕೆ ನನ್ನ ತಾಯಿ ಮತ್ತು 3 ನೇ ಪ್ರತಿವಾದಿ ದಾಕ್ಷಾಯಿಣಿಯವರು ಸಹಿ ಮಾಡಿದ್ದರು ಎಂದರೆ ಸರಿಯಲ್ಲ. ವಾದ ಪತ್ರದಲ್ಲಿನ ವಾದಿಯ ಸಹಿಗಳು ಮತ್ತು ಈಗ ತೋರಿಸಿದ ಪಾಲುವಿಭಾಗ ಪತ್ರದಲ್ಲಿನ ವಾದಿಯ ಸಹಿಗಳನ್ನು ಕೈಬರಹ ತಜ್ಞರಿಗೆ ಕಳುಹಿಸಿಕೊಡಲು ನನಗೆ ಆಕ್ಷೇಪಣೆ ಇದೆಯೇ? ಎಂದರೆ ಆಕ್ಷೇಪಣೆ ಇಲ್ಲ. ನೋಂದಣೆಯಾಗದ ಪಾಲುವಿಭಾಗ ಪತ್ರದಲ್ಲಿ ನನ್ನ ತಾಯಿ ಸಹಿ ಮಾಡಿದ್ದರೂ ಇಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಪಾಲುವಿಭಾಗ ಪತ್ರದ ಪ್ರಕಾರ 1 ನೇ ಪ್ರತಿವಾದಿಯ ಹಿಸ್ಸೆಗೆ ಸ. ನಂ. 329/ಇ1 ರಲ್ಲಿ 1 ಎಕರೆ 67 ಸೆಂಟ್ಸ್ ಮತ್ತು ಸ. ನಂ. 329 ಸಿ/1 ರಲ್ಲಿ 85 ಸೆಂಟ್ಸ್ ಬಂದಿತ್ತು ಎಂದರೆ ಸರಿಯಲ್ಲ. ಅದೇ ರೀತಿ ಸದರಿ ಪಾಲುವಿಭಾಗ ಪತ್ರದ ಪ್ರಕಾರ 2 ನೇ ಪ್ರತಿವವಾದಿಯ ಹಿಸ್ಸೆಗೆ ಸ. ನಂ, 329/ಇ1 ರಲ್ಲಿ 1 ಎಕರೆ 63 ಸೆಂಟ್ಸ್ ಮತ್ತು ಸ. ನಂ. 329 ಸಿ/1 ರಲ್ಲಿ 85 ಸೆಂಟ್ಸ್ ಬಂದಿತ್ತು ಎಂದರೆ ಸರಿಯಲ್ಲ. ವಾದಿ ಮತ್ತು 1 ರಿಂದ 3 ನೇ ಪ್ರತಿವಾದಿಗಳ ತಾಯಿ ಶಿವಬಸಮ್ಮನವರು ಆಕೆ ಮರಣ ಹೊಂದಿದ ನಂತರ ಸದರಿ ಪಾಲುವಿಭಾಗ ಪತ್ರದ ಪ್ರಕಾರ ಖಾತೆ ಮಾಡಿಸಿಕೊಳ್ಳಬೇಕು ಎಂದು ಹೇಳಿದ್ದರು ಎಂದರೆ ಸರಿಯಲ್ಲ ಶಿವಬಸಮ್ಮ ಸದರಿ ಪಾಲುವಿಭಾಗ ಪತ್ರದಲ್ಲಿ ಕೆಲವು ಷರತ್ತುಗಳನ್ನು ವಿಧಿಸಿ ವಾದಿ ಮತ್ತು 3 ನೇ ಪ್ರತಿವಾದಿಗೆ ಯಾವುದೇ ಆಸ್ತಿ ನೀಡುವುದಿಲ್ಲ, 1 ಮತ್ತು 2 ನೇ ಪ್ರತಿವಾದಿಗಳನ್ನು ಬಡವರ ಮನೆಗೆ ಮದುವೆ ಮಾಡಿಕೊಟ್ಟಿರುವುದರಿಂದ ಅವರಿಬ್ಬರಿಗೆ ಮಾತ್ರ ಆಸ್ತಿ ನೀಡುವುದಾಗಿ ತಿಳಿಸಿದ್ದರು ಎಂದರೆ ಪಾಲುವಿಭಾಗ ಆಗಿಲ್ಲ ವಾದಿ ಮತ್ತು 3 ನೇ ಪ್ರತಿವಾದಿಗೆ ಮನೆಗಳ ಆಸ್ತಿಗಳನ್ನು ಮುಂಚೆಯೇ ನೀಡಲಾಗಿತ್ತು ಎಂದರೆ ಸರಿಯಲ್ಲ. ಸ. ನಂ. 235 ಎ/3 ರಲ್ಲಿ 1 ಎಕರೆ 82 ಸೆಂಟ್ಸ್ ಆಸ್ತಿಯನ್ನು ಶಿವಬಸಮ್ಮನ ಜೀವನಾಂಶಕ್ಕಾಗಿ ಇಡಲಾಗಿತ್ತು ಎಂದರೆ ಸರಿಯಲ್ಲ. ಹಾಗಾದರೇ ಶಿವಬಸಮ್ಮನಿಗೆ ಸ. ನಂ. 235 ಎ/3 ರಲ್ಲಿ 1 ಎಕರೆ 82 ಸೆಂಟ್ಸ್ ಹೇಗೆ ಖಾತೆ ಬದಲಾವಣೆ ಮಾಡಿದ್ದಾರೆ? ಎಂದರೆ ಪಾಲುವಿಭಾಗ ಮೂಲಕ ಮಾಡಿದ್ದಾರೆ. ಸದರಿ ಆಸ್ತಿಯ ಖಾತೆ ಶಿವಬಸಮ್ಮನ

ಹೆಸರಿಗೆ ಇದ್ದಿದ್ದರಿಂದಲೇ ಆಕೆ ದಿನಾಂಕ 11.08.2011 ರಂದು ಅದನ್ನು ವಿಲ್ ಮೂಲಕ 1 ನೇ ಪ್ರತಿವಾದಿಗೆ ಬರೆದುಕೊಟ್ಟಿದ್ದಾರೆ ಎಂದರೆ ವಿಲ್ ಬಗ್ಗೆ ನಮಗೆ ಗೊತ್ತಿಲ್ಲ. ನಾನು ಹೇಳುತ್ತೇನೆ, 1 ನೇ ಪ್ರತಿವಾದಿ ಸದರಿ ಆಸ್ತಿಯನ್ನು ಮಾರಾಟ ಮಾಡಿದ ನಂತರವೇ ನಮಗೆ ವಿಲ್ ಬಗ್ಗೆ ಗೊತ್ತಾಯಿತು. ವಿಲ್ ಬರೆಯುವ ಮುಂಚೆಯಿಂದಲೂ ಶಿವಬಸಮ್ಮ 1 ನೇ ಪ್ರತಿವಾದಿಯ ಮನೆಯಲ್ಲಿ ಇದ್ದು, 1 ನೇ ಪ್ರತಿವಾದಿಯೇ ಶಿವಬಸಮ್ಮನ ಲಾಲನೆ-ಪಾಲನೆ ಮಾಡುತ್ತಿದ್ದರು ಎಂದರೆ ಇಲ್ಲ, ಎಲ್ಲಾ ಮಕ್ಕಳೂ ಶಿವಬಸಮ್ಮನನ್ನು ಪೋಷಣೆ ಮಾಡಿದ್ದಾರೆ. ಶಿವಬಸಮ್ಮ ಆರೋಗ್ಯವಾಗಿ ಇದ್ದು ಮಾನಸಿಕ ಸ್ಥಿತಿ ಉತ್ತಮವಾಗಿದ್ದಾಗಲೇ 1 ನೇ ಪ್ರತಿವಾದಿಗೆ ವಿಲ್ ಬರೆದಿದ್ದರು ಎಂದರೆ ಇಲ್ಲ, ಆರೋಗ್ಯ ಚೆನ್ನಾಗಿರಲಿಲ್ಲ. ಶಿವಬಸಮ್ಮ 01.01.2017 ರಂದು ಮೃತಪಟ್ಟಿದ್ದಾರೆ. ಶಿವಬಸಮ್ಮನ ಮರಣಾ ನಂತರ 1 ನೇ ಪ್ರತಿವಾದಿ ವಿಲ್ ದಾಖಲೆಯ ಆಧಾರದ ಮೇಲೆ ಖಾತೆ ಬದಲಾವಣೆ ಮಾಡಿಸಿಕೊಂಡಿದ್ದಾರೆ ಎಂದರೆ ಅದರ ಬಗ್ಗೆ ಮಾಹಿತಿ ಇಲ್ಲ. ಸದರಿ ಮ್ಯುಟೇಶನ್ ಆದೇಶವನ್ನು ನಾವು ಎ.ಸಿ.ಯವರ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿದ್ದೇವೆ. ಸದರಿ ಅಪೀಲನ್ನು ವಾದಿ ಮತ್ತು 2 ನೇ ಪ್ರತಿವಾದಿ ಸಲ್ಲಿಸಿದ್ದರು. ಎ.ಸಿ. ಯವರ ಮುಂದೆ ಪ್ರಕರಣ ದಾಖಲಿಸುವ ಕಾಲಕ್ಕೆ ವಾದಿ ಮತ್ತು 2 ನೇ ಪ್ರತಿವಾದಿಯ ನಡುವೆ ಸಂಬಂಧ ಚೆನ್ನಾಗಿಯೇ ಇತ್ತು ಎಂದರೆ ಸರಿ. ಈ ದಾವೆಯಲ್ಲಿ ನನ್ನ ತಾಯಿಯಾದ ವಾದಿಯು ಉಮಾಶಂಕರ ಅವರನ್ನು ಸಹವಾದಿಯನ್ನಾಗಿ ಮಾಡದೇ 2 ನೇ ಪ್ರತಿವಾದಿಯನ್ನಾಗಿ ಮಾಡಿದ್ದಾರೆ ಎಂದರೆ ಸರಿ. ಎ.ಸಿ.ಯವರ ಮುಂದೆ ಪ್ರಕರಣ ದಾಖಲಿಸುವಾಗ ಪಹಣಿಗಳು ಮತ್ತು ಮ್ಯುಟೇಶನ್ ದಾಖಲೆಗಳ ಆಧಾರದ ಮೇಲೆ ಸಲ್ಲಿಸಿದ್ದೆವು. ಆಗ ಪಹಣಿ 4 ನೇ ಪ್ರತಿವಾದಿ ಮಲ್ಲಿಕಾರ್ಜುನಪ್ಪನವರ ಹೆಸರಿನಲ್ಲಿ ನಮೂದಾಗಿತ್ತು. ಎ.ಸಿ.ಯವರ ಪ್ರಕರಣದಲ್ಲಿ ನಾವು 4 ನೇ ಪ್ರತಿವಾದಿಯನ್ನು ಪಕ್ಷಕಾರರಾಗಿ ಮಾಡಿರಲಿಲ್ಲ. 1 ನೇ ಪ್ರತಿವಾದಿ ಮತ್ತು 4 ನೇ ಪ್ರತಿವಾದಿ ನಡುವೆ ಆಗಿದ್ದ ಕ್ರಯದ ಕರಾರಿನ ಬಗ್ಗೆ ನಮಗೆ ಮಾಹಿತಿ ಇತ್ತೇ? ಎಂದರೆ ಮಾಹಿತಿ ಇರಲಿಲ್ಲ. ದಿನಾಂಕ 20.10.2018 ರಂದು 1 ನೇ ಪ್ರತಿವಾದಿಯು 4 ನೇ ಪ್ರತಿವಾದಿಗೆ ಸ. ನಂ. 235 ಎ/3 ರಲ್ಲಿ 1 ಎಕರೆ 82 ಸೆಂಟ್ಸ್ ಮಾರಾಟ ಮಾಡಲು ಮಾತುಕತೆ ಮಾಡಿದಾಗ ನನ್ನ ತಾಯಿ ವಾದಿ ಮತ್ತು ಉಳಿದ ಪ್ರತಿವಾದಿಗಳು ಎಲ್ಲರೂ ಹಾಜರಿದ್ದರು ಎಂದರೆ ಸರಿಯಲ್ಲ. ಸದರಿ ಕ್ರಯದ ಕರಾರು ಪತ್ರಕ್ಕೆ ನನ್ನ ತಾಯಿ, 2 ಮತ್ತು 3 ನೇ ಪ್ರತಿವಾದಿಗಳು ಕೂಡಾ ಒಪ್ಪಿಗೆ ಸಾಕ್ಷಿಗಳಾಗಿ ಸಹಿ ಮಾಡಿದ್ದರು ಎಂದರೆ ಸರಿಯಲ್ಲ. ನನ್ನ ತಾಯಿ ಮತ್ತು 2 ಹಾಗೂ 3 ನೇ ಪ್ರತಿವಾದಿಗಳು ಒಪ್ಪಿಗೆ ಕೊಟ್ಟಿದ್ದರಿಂದಲೇ 1 ನೇ ಪ್ರತಿವಾದಿಯು ದಿನಾಂಕ 02.05.2019 ರಂದು 4 ನೇ ಪ್ರತಿವಾದಿಗೆ ಕ್ರಯ ಪತ್ರ ಬರೆದುಕೊಟ್ಟರು ಎಂದರೆ ಸರಿಯಲ್ಲ. ನಾವು ಎ.ಸಿ.ಯವರ ನ್ಯಾಯಾಲಯದ ಪ್ರಕರಣದಲ್ಲಿ 4 ನೇ ಪ್ರತಿವಾದಿಯನ್ನು ಪಕ್ಷಕಾರನಾಗಿ ಮಾಡದೇ ಆದೇಶ ಪಡೆದಿದ್ದರಿಂದ 4 ನೇ ಪ್ರತಿವಾದಿಯು ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಅಪೀಲು ಸಲ್ಲಿಸಿದ್ದರು ಎಂದರೆ ಸರಿ. ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಎ.ಸಿ.ಯವರ ಆದೇಶವನ್ನು ರದ್ದುಪಡಿಸಿ 4 ನೇ ಪ್ರತಿವಾದಿ ಹೆಸರಿಗೆ ಖಾತೆ

ನಮೂದಾಗಿರುವುದು ಸರಿಯಾಗಿಯೇ ಇದೆ ಎಂದು ಆದೇಶ ಮಾಡಿದ್ದಾರೆ ಎಂದರೆ ನಮಗೆ ಅದರ ಬಗ್ಗೆ ಮಾಹಿತಿ ಇಲ್ಲ, ನಮಗೆ ಯಾವುದೇ ನೋಟೀಸ್ ಬಂದಿಲ್ಲ. ಆ ಪ್ರಕರಣದಲ್ಲಿ ನಾವು ವಕೀಲರನ್ನು ನೇಮಕ ಮಾಡಿಕೊಂಡು ಹಾಜರಾಗಿದ್ದೆವು ಎಂದರೆ ಸರಿಯಲ್ಲ.

05. ಶಿವಬಸಮ್ಮ ಮೃತಪಡುವ ಮುಂಚೆ ಆಕೆಗೆ ಬಂಗಾರದ ಆಭರಣಗಳು ಇದ್ದವು. ಸದರಿ ಬಂಗಾರದ ಆಭರಣಗಳನ್ನು ನಾವು ಪಾಲುವಿಭಾಗ ದಾವೆಗೆ ಸೇರಿಸಿಲ್ಲ. ಶಿವಬಸಮ್ಮನ ಹೆಸರಿನಲ್ಲಿ ಆಕೆಯ ಮಗ ಬ್ಯಾಂಕಿನಲ್ಲಿ ರೂ. 1 ಲಕ್ಷ 35 ಸಾವಿರ ಸಾಲ ಪಡೆದಿರುವ ವಿಚಾರ ನಮಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯ ಮಗ ಶಿವಬಸಮ್ಮನ ಬಂಗಾರದ ಆಭರಣಗಳನ್ನು ಅಡವಿಟ್ಟು ಸಾಲ ಪಡೆದಿದ್ದರು ಎಂದರೆ ನಮಗೆ ಗೊತ್ತಿಲ್ಲ. ಶಿವಬಸಮ್ಮನ ಮರಣಾ ನಂತರ ಬ್ಯಾಂಕಿನವರು ವಾರಸುದಾರಿಕೆ ಪತ್ರ ನೀಡಿದರೆ ಮಾತ್ರ ಆಭರಣಗಳನ್ನು ವಾಪಸ್ಸು ಮಾಡುವುದಾಗಿ ತಿಳಿಸಿದ್ದರು ಎಂದರೆ ನಮಗೆ ಮಾಹಿತಿ ಇಲ್ಲ. ಶಿವಬಸಮ್ಮ 1 ನೇ ಪ್ರತಿವಾದಿಗೆ ವಿಲ್ ಬರೆದುಕೊಟ್ಟ ಬಗ್ಗೆ, ವಿಲ್ ಪ್ರಕಾರ 1 ನೇ ಪ್ರತಿವಾದಿ ಖಾತೆ ಮಾಡಿಸಿಕೊಂಡ ಬಗ್ಗೆ ಮತ್ತು 4 ನೇ ಪ್ರತಿವಾದಿಗೆ 1 ನೇ ಪ್ರತಿವಾದಿ ಮಾರಾಟ ಮಾಡಿದ ಬಗ್ಗೆ ಎಲ್ಲಾ ಮಹಿತಿ ಇದ್ದರೂ ಇಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿಗೆ ಈ ಎಲ್ಲಾ ಮಾಹಿತಿ ಇದ್ದು ಅವರು ಸಾಕ್ಷಿ ಹೇಳಲು ಬಂದರೆ ನಿಜ ಸಂಗತಿಗಳನ್ನು ಒಪ್ಪಬೇಕಾಗುತ್ತದೆ ಎಂಬ ಕಾರಣದಿಂದ ಜಿ.ಪಿ.ಎ ಕೊಟು ನನ್ನ ಮೂಲಕ ಸಾಕ್ಷಿ ಹೇಳಿಸುತ್ತಿದ್ದಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ತೊಂದರೆ ಕೊಡಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

***ಪಾಟೀ ಸವಾಲು : 2 ಮತ್ತು 4 ನೇ ಪ್ರತಿವಾದಿಗಳ ಪರ ವಕೀಲರು ಕಾಲಾವಕಾಶ ಕೋರಿದ್ದರಿಂದ ಖರ್ಚು ಸಹಿತ ಮುಂದೂಡಲಾಗಿದೆ.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ).

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಹೂವಿನ ಹಡಗಲಿ.